ಆ) 15.70 ಕೋಟಿ ರೂ.ಗಳು

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಕಾಮಗಾರಿಗಳು

208 (1250)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿಗೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಶಾಸಕರ ಅನುದಾನದಿಂದ ಎಷ್ಟು ಕಾಮಗಾರಿಗಳನ್ನು ತೀರ್ಥಹಳ್ಳಿ ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ನಿಗಧಿಪಡಿಸಿದ ಹಣವೆಷ್ಟು?

ಆ) ಇದುವರೆವಿಗೂ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ?

ಇ) ಪ್ರಾರಂಭಿಸದೇ ಇರುವ ಕಾಮಗಾರಿಗಳ ಯಾವುವು? ಅವುಗಳನ್ನು ಯಾವ ಕಾರಣಕ್ಕಾಗಿ ಪ್ರಾರಂಭಿಸಿಲ್ಲ.

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡ ರಾಜ್ಯ ಸಚಿವರು):

ಅ) 19 ಕಾಮಗಾರಿಗಳು ನಿಗಧಿಪಡಿಸಿದ ಹಣ 21 ಲಕ್ಷಗಳು.

ಆ) 10 ಕಾಮಗಾರಿಗಳು ಮುಗಿದಿದ್ದು 7 ಕಾಮಗಾರಿಗಳ ಪ್ರಗತಿಯಲ್ಲಿರುತ್ತದೆ.

ಇ) ಈ ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಯು ಇನ್ನೂ ಅನುಮೋದನೆ ಆಗಿಲ್ಲವಾದ್ದರಿಂದ ಈ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಿಲ್ಲ.

1) ಬೊಮ್ಮರಸಯ್ಯನ ಅಗ್ರಹಾರದಿಂದ ಹೊರೇಬೈಲು ಬುಣ್ಣಪುರ ರಸ್ತೆಯಲ್ಲಿ ಹನ್ನಂಗಿ ಹಳ್ಳಕ್ಕೆ ಕಾಲು ಸೇತುವೆ (ಅಂದಾಜು ಮೊತ್ತ 10 ಲಕ್ಷ)

2) ಕುಬ್ಬಲು ಕನ್ನಂಗಿ-ಕಿಕ್ಕರಿ ರಸ್ತೆಯಲ್ಲಿ ಸೋಮವಾರಿ ಹಳ್ಳಕ್ಕೆ ಹಳ್ಳಕ್ಕೆ ಸೇತುವೆ (ಅಂದಾಜು ಮೊತ್ತ 4 ಲಕ್ಷ)

ಶ್ರೀ ಆರಗಜ್ಞಾನೇಂದ್ರ: ಉಪಾಧ್ಯಕ್ಷರೆ, ನಮಗೆ ಒದಗಿಸತಕ್ಕಂಥ ಹಣವೇ ಕಡಿಮೆ ಅದರಲ್ಲಿ ನಾವು ಕಾಮಗಾರಿಗಳನ್ನು ಕೊಟ್ಟರೆ, ಈ ಮಲೆನಾಡು ಅಭಿವೃದ್ಧಿ ಮಂಡಳಿ, ಒಂದು ವರ್ಷದಲ್ಲಿ ಕಾಮಗಾರಿಯನ್ನು ಪ್ರಾರಂಭವೇ ಮಾಡುವುದಿಲ್ಲ; ಅಂದಾಜುಪಟ್ಟಿಯನ್ನೇ ಅನುಮೋದನೆ ಮಾಡುವುದಿಲ್ಲವೆಂದರೆ ಈ ಮಂಡಳಿ ಎಷ್ಟು ನಿಷ್ಕ್ರಿಯವಾಗಿದೆ ಎನ್ನುವುದು ತಿಳಿಯುವುದು. ನನ್ನ ಕ್ಷೇತ್ರಕ್ಕೆ ಕೊಟ್ಟಿದ್ದೇ 21 ಲಕ್ಷ ರೂ.

ಅದರಲ್ಲಿ 14 ಲಕ್ಷ ರೂ.ಗಳ ಕಾಮಗಾರಿ ಬಾಕಿ ಉಳಿದುಕೊಂಡಿದೆ. ಇವರು ಒಂದು ವರ್ಷದಲ್ಲಿ 7 ಲಕ್ಷದ ಕಾಮಗಾರಿಗಳನ್ನು ಮಾಡಿದ್ದಾರೆ, ಶಾಸಕರಾಗಿ ನಾವು ಹೇಗೆ ಕೆಲಸ ಮಾಡುವುದು, ಈ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ, ಇದನ್ನು ಚುರುಕು ಮಾಡುವುದಕ್ಕೆ ಏನು ಮಾಡುತ್ತಾರೆನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ವೆಂಕಟೇಶ್: ಮಾನ್ಯ ಸದಸ್ಯರು ಕಾಮಗಾರಿಗಳಿಗೆ ಮಂಜೂರಾತಿಯನ್ನೇ ಕೊಟ್ಟಿಲ್ಲವೆಂದು ಹೇಳಿದ್ದಾರೆ. 21 ಲಕ್ಷ ರೂಪಾಯಿಗಳಲ್ಲಿ 19 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಅದರಲ್ಲಿ ಹತ್ತು ಕಾಮಗಾರಿಗಳ ಕೆಲಸ ಈಗಾಗಲೇ ಮುಗಿದಿದೆ, ಆದರೆ ಎರಡು ಕಾಮಗಾರಿಗಳಿಗೆ ಮಂಡಳಿಯಿಂದ ಮಂಜೂರಾತಿಯನ್ನು ನೀಡಿಲ್ಲ. ಕಾರಣವೇನೆಂದರೆ, ಬೊಮ್ಮರಸಯ್ಯನ ಅಗ್ರಹಾರದಿಂದ ಹೊರೇಬೈಲು ಬುಣ್ಣಪುರ ರಸ್ತೆಯಲ್ಲಿ ಹೆನ್ನಂಗಿಳ್ಳಕ್ಕೆ ಕಾಲು ಸೇತುವೆ ನಿರ್ಮಾಣಕ್ಕೆ 10 ಲಕ್ಷ ರೂ. ಅಂದಾಜುಪಟ್ಟಿ ಮಂಡಳಿಗೆ ದಿನಾಂಕ: 15-4-1998ರಲ್ಲಿ ಬಂದಿದೆ. ಮತ್ತೊಂದು ಕುಬ್ಬುರು ಕನ್ನಂಗಿ-ಕಿಕ್ಕರಿ ರಸ್ತೆಯಲ್ಲಿ ನೋವಾಗಿ ಹಳ್ಳಿಕ್ಕೆ ಹಳ್ಳಕ್ಕೆ ಸೇತು ನಿರ್ಮಾಣಕ್ಕೆ ಇನ್ನು ಅಂದಾಜುಪಟ್ಟಿಯೇ ನಮ್ಮ ಮಂಡಳಿಗೆ ಬಂದಿಲ್ಲ, ನಾವು ಈ ಎರಡು ಕಾಮಗಾರಿಗಳಿಗೆ ಮಾತ್ರ ಮಂಜೂರಾತಿಯನ್ನು ಕೊಡಬೇಕಾಗಿದೆ. ಉಳಿದ ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದೆ.

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಒಂದು ಕಾಮಗಾರಿಗೆ ಅಂದಾಜು ಪಟ್ಟಿ ಬಂದಿದೆ, ಇನ್ನೊಂದು ಕಾಮಗಾರಿಗೆ ಅಂದಾಜುಪಟ್ಟಿ ಬರಲಿಲ್ಲವೆಂದು ಹೇಳಿದರು. ಇವರ ಮಲೆನಾಡು ಅಭಿವೃದ್ಧಿ ಮಂಡಳಿಗೆ ಹಾಗೂ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ನಡುವೆ ಹೊಂದಾಣಿಕೆ ಇಲ್ಲ. ನನ್ನ ಕ್ಷೇತ್ರದಲ್ಲಿ 21 ಲಕ್ಷದ ಕಾಮಗಾರಿಗಳಲ್ಲಿ 7 ಲಕ್ಷ ರೂ.ಗಳ ಸಣ್ಣಸಣ್ಣ ಕಾಮಗಾರಿಗಳನ್ನು ಈಗಾಗಲೇ ಮುಗಿಸಿದ್ದಾರೆ. ದೊಡ್ಡ ದೊಡ್ಡ ಕಾಮಗಾರಿಗಳೇನಿದ್ದಾವೆ, ಮಲೆನಾಡಿನಲ್ಲಿ ಮಳೆ ಪ್ರಾರಂಭವಾಗುತ್ತಿದೆ, ಇವತ್ತು ಅಂದಾಜುಪಟ್ಟಿ ಬಂದರೂ ಅದನ್ನು ಅನುಮೋದನೆ ಮಾಡಿ ಕಾಮಗಾರಿಯನ್ನು ಪ್ರಾರಂಭ ಮಾಡುವುದು ಯಾವಾಗ? ಆ ಸೇತುವೆಯ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕಾಗುವುದು ಮಳೆಗಾಲ ಮುಗಿದ ಮೇಲೆ. ಕೊಡುವ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಇಂಜಿನಿಯರಿಂಗ್ ವಿಭಾಗ ಇವರ ಜೊತೆ ಸಹಕರಿಸುವುದಿಲ್ಲವೇ? ಅವೆರಡನ್ನೂ ಕೊಆರ್ಡಿನೇಟ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಇಲ್ಲದಿದ್ದರೆ ಕಾಮಗಾರಿಯನ್ನು ಮಾಡಿ ಪೂರೈಸುವುದು ಹೇಗೆ?

ಶ್ರೀ ಕೆ.ವೆಂಕಟೇಶ್: ಸನ್ಮಾನ್ಯ ಉಪಾಧ್ಯಕ್ಷರೆ, ಸಾಮಾನ್ಯವಾಗಿ ಆಯಾ ಕ್ಷೇತ್ರದ ಶಾಸಕರಿಗೆ ಏನೇನು ಕಾಮಗಾರಿಗಳಿರುತ್ತವೆನ್ನುವುದೆಲ್ಲಾ ತಿಳಿದಿರುವ ವಿಚಾರ. ಮಲೆನಾಡು ಅಭಿವೃದ್ಧಿ ಮಂಡಲಿ ಹಾಗೂ ಡಿಪಾರ್ಟ್‌ಮೆಂಟಿನ ನಡುವೆ

ಹೊಂದಾಣಿಕೆಯಿಲ್ಲವೆನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಾವು ಆಕ್ಷನ್ ಪ್ಲಾನ್ ಮಂಜೂರು ಮಾಡಿದ ಮೇಲೆ ಸಂಬಂಧಿಸಿದ ಅಧಿಕಾರಿಗಳಿಗೆ ಇದಕ್ಕೆ ಯೋಜನ ಅಂದಾಜನ್ನು ಕೊಡಬೇಕೆಂದು ಹೇಳುತ್ತೇವೆ, ಅದನ್ನು ಕೊಡಬೇಕಾದ್ದು ಅವರ ಜವಾಬ್ದಾರಿ. ಜೊತೆಗೆ ನಮ್ಮ ಶಾಸಕರುಗಳು ಪ್ರತಿ ತಿಂಗಳಿಗೆ, ಮೂರು ತಿಂಗಳಿಗೆ ಒಂದು ಸಾರಿ ರಿವ್ಯೂ ಮಾಡುತ್ತಿರುತ್ತಾರೆ, ತಾವು ಇದನ್ನೆಲ್ಲಾ ಹೋಗಿ ನೋಡಬೇಕಾಗುತ್ತದೆ. ಇವರು ಬರೀ ಏಳು ಲಕ್ಷ ರೂಪಾಯಿಗಳ ಕೆಲಸವಾಗಿದೆ ಎಂದು ಹೇಳುತ್ತಾರೆ. ನಮ್ಮಲ್ಲಿ ಲಭ್ಯವಿರುವ ವರದಿಯ ಪ್ರಕಾರ ಕಾಮಗಾರಿ ನಡೆದಿರುವುದಕ್ಕೆ 11 ಲಕ್ಷ ಚಿಲ್ಲರೆ ಹಣ ಪಾವತಿ ಮಾಡಲಾಗಿದೆ, ಇನ್ನು ಉಳಿದ ಕೆಲಸಗಳು ಪ್ರಗತಿಯಲ್ಲಿದೆ. ನೀವು ಹೇಳಿದಂತೆ ಈ ಎರಡು ಕೆಲಸಗಳು ನಿಧಾನವಾಗಿವೆ ನಾನು ಸಂಬಂಧಿಸಿದ ಅಧಿಕಾರಿಗಳಿಗೆ ಹೇಳಿ ಅದಷ್ಟು ಬೇಗ ಇನ್ನೊಂದು ಅಂದಾಜು ಪಟ್ಟಿ ತರಿಸಿಕೊಂಡು ಮಂಜೂರು ಮಾಡಿಕೊಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಇಡೀ ಮಲೆನಾಡು ಅಭಿವೃದ್ಧಿ ಪ್ರದೇಶಕ್ಕೆ 71 ವಿಧಾನಸಭಾ ಕ್ಷೇತ್ರಕ್ಕೆ ಬರುವಂತಹ ಪರಿಶಿಷ್ಟಜಾತಿ ಪರಿಶಿಷ್ಟವರ್ಗಗಳಿಗೆ ಮೀಸಲಿಟ್ಟಂತಹ ಹಣ 1997-98ರಲ್ಲಿ ಎಷ್ಟು, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಅದೇ ರೀತಿ ಮಲೆನಾಡು ಅಭಿವೃದ್ಧಿಗೆ 1997-98ಕ್ಕೆ ಮೀಸಲಿಟ್ಟಂತಹ ಹಣವೆಷ್ಟು ಎಷ್ಟು ಬಿಡುಗಡೆ ಮಾಡಿದ್ದೀರಿ?

ಶ್ರೀ ಕೆ.ವೆಂಕಟೇಶ್: ಮಾನ್ಯ ಉಪಾಧ್ಯಕ್ಷರೆ, 1997-98ರಲ್ಲಿ 30 ಕೋಟಿ ರೂ.ನಿಗದಿ ಮಾಡಿದ್ದೆವು ಅದರಲ್ಲಿ ಎಸಿಪಿ: ಟಿಎಸ್‌ಪಿಗೆ ಹೋದರೆ, ಇನ್ನು 21 ಕೋಟಿ ರೂ.ಗಳನ್ನು ಸಾಮಾನ್ಯ ಕಾಮಗಾರಿಗಳಿಗೆ ಕೊಟ್ಟಿದ್ದೇವೆ. 1997-98ರಲ್ಲಿ ಎಸ್‌ಸಿಪಿ ಟಿಎಸ್‌ಪಿಗೆ ನಾವು ಯಾವುದೇ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ, 1997-98ರಲ್ಲಿ ಸಾಮಾನ್ಯ ಕಾಮಗಾರಿಗಳನ್ನೇ ತೆಗೆದುಕೊಂಡಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರು ತುಂಬ ಸ್ಪಷ್ಟವಾಗಿ ಹೇಳಲಿ, ಏಕೆಂದರೆ ಆ ಸಮಿತಿಯ ಅಧ್ಯಕ್ಷರು ಅವರೇ ಮಲೆನಾಡು ಪ್ರದೇಶಭಿವೃದ್ಧಿ ಮಂಡಳಿಗೆ ಮೊನ್ನೆ ಅವರೆ ಅಧ್ಯಕ್ಷರನ್ನಾಗಿ ಮಾಡಿರತಕ್ಕಂಥ ಸ್ವರ್ಣ ಪ್ರಭಾಕರ್‌ರವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಯನ್ನು ಮಾಡಿದೆವು, ಒಂದು ಸಭೆಯನ್ನು ಮಾಡಿದ್ದೆವು. ಎಸ್‌ಸಿಪಿಗೆ ಮತ್ತು ಟಿಎಸ್‌ಪಿಗೆ ಇಟ್ಟಂಥ 8 ಕೋಟಿ 20 ಲಕ್ಷ ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಿಲ್ಲ. ಸಾಮಾನ್ಯವಾಗಿ ಮೀಸಲಿಟ್ಟ ರೂ. 5 ಕೋಟಿ 30 ಲಕ್ಷಗಳನ್ನೂ ಕೂಡ ಬಿಡುಗಡೆ ಮಾಡಿಲ್ಲ. ಇವರು 1997-98ನೇ ಸಾಲಿಗೆ ಮಲೆನಾಡು ಅಭಿವೃದ್ಧಿಮಂಡಳಿಗೆ ಒಟ್ಟು 30 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದರು. ಬಿಡುಗಡೆ ಮಾಡಿರುವುದು 15 ಕೋಟಿ 70 ಲಕ್ಷ ರೂಪಾಯಿಗಳು, ಉಳಿದ ಹಣದ ಕತೆ ಏನು ಸ್ವಾಮಿ?

10.50 ಎಎಂ

ಮಾಡಿದ್ದು 15 ಲಕ್ಷ ಉಳಿದ ಹಣವನ್ನು ಬಿಡುಗಡೆ ಮಾಡುತ್ತೀರೋ ಅಥವಾ ಮಾಡುವುದಿಲ್ಲವೋ? ಏಕೆಂದರೆ ಮೊನ್ನೆಯ ಸಭೆಯಲ್ಲಿ ಮುಖ್ಯ ಮಂತ್ರಿಗಳನ್ನು, ಉಪ ಮುಖ್ಯ ಮಂತ್ರಿಗಳನ್ನು, ಆ ಖಾತೆಯ ಮಂತ್ರಿಗಳನ್ನು ಕೇಳಿದ್ದೆವು. ಏಕೆಂದರೆ ಅಲ್ಲಿ ಅನೇಕ ಕಡೆ ಕೆಲಸವಾಗಿ ಹೋಗಿದೆ. ಯೋಜನೆ ಕೊಟ್ಟು ಅಪ್ರೂವ್ ಆದಮೇಲೆ ಆಗಿರುವ ಕೆಲಸಗಳಿಗೆ ಹಣ ಖೋತಾ ಮಾಡಿದರೆ ನಮ್ಮ ಕತೆ ಏನು? ಮುಂದಿನ ವರ್ಷಕ್ಕೆ ಖೋತಾ ಮಾಡುತ್ತೇವೆ ಎಂದು ಹೇಳುತ್ತಾರೆ. ಹಿಂದೆ 1997-98ಕ್ಕೆ ಇಟ್ಟಂಥ ಹಣವನ್ನು ನೀವು ಖೋತಾ ಮಾಡಿ, ಮುಂದಿನ ವರ್ಷಕ್ಕೆ 60 ಕೋಟಿ ಇಡುತ್ತೇವೆ ಎಂದು ಹೇಳಿದಿರಿ. ಇಟ್ಟಿದ್ದ 60 ಕೋಟಿಯಲ್ಲೂ 20 ಕೋಟಿ ವಾಪಸ್ಸು ತರುತ್ತಿದ್ದೀರಿ. 20 ಕೋಟಿಗೆ ತಂದು ಕಳೆದ ಬಾರಿಯ 15 ಕೋಟಿಯನ್ನು ಖೋತಾ ಮಾಡಿದರೆ ಇನ್ನು 4 ಕೋಟಿ ಉಳಿಯುತ್ತದೆ. ಆ ನಾಲ್ಕು ಕೋಟಿಯಲ್ಲಿ ಹಿಂದೆ ಟೆಂಡರ್ ಹಾಕಿದವರಿಗೆ 2 ಕೋಟಿ ಹೋದರೆ ಇನ್ನೂ 2 ಕೋಟಿ ಮಾತ್ರ ಉಳಿಯುತ್ತದೆ. 71 ಜನ 2 ಕೋಟಿಯನ್ನು ತೆಗೆದುಕೊಂಡು ಏನು ಮಾಡಬೇಕು? ತಾವು ಸ್ಪಷ್ಟವಾಗಿ ಹೇಳಿ, ಹಿಂದೆ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಇಟ್ಟಿದ್ದಂಥ ಮೀಸಲು ಹಣವನ್ನು ಯಾವಾಗ ಬಿಡುಗಡೆ ಮಾಡಿಸುತ್ತೀರಿ? ಅದೇ ರೀತಿ ಸಾಮಾನ್ಯವಾಗಿ ಇಟ್ಟಂಥ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಹಿಂದೆ ಇಟ್ಟಿದ್ದಂಥ ಹಣದಲ್ಲಿ ಒಂದು ಪೈಸೆಯನ್ನೂ ಕೂಡ ಖೋತಾ ಮಾಡಲು ನಾವು ಬಿಡುವುದಿಲ್ಲ. ಏಕೆಂದರೆ ಕೆಲಸ ಆಗಿ ಹೋಗಿದೆ. ಆದ್ದರಿಂದ ಈ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. 1998-99ಕ್ಕೆ ಇಟ್ಟಂಥ ಹಣದಲ್ಲಿ ಒಂದು ರೂಪಾಯಿಯನ್ನೂ ಖೋತಾ ಮಾಡುವುದಿಲ್ಲ ಎನ್ನುವುದನ್ನು ಮಂತ್ರಿಗಳಿಂದ ಸ್ಪಷ್ಟವಾಗಿ ಕೇಳಲು ನಾನು ಇಷ್ಟಪಡುತ್ತೇನೆ.

ಶ್ರೀ ಕೆ.ವೆಂಕಟೇಶ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಸ್ವಲ್ಪ ಕನ್‌ಫ್ಯೂಷನ್ ಮಾಡಿಕೊಂಡಿದ್ದಾರೆ ಎಂದು ಕಾಣುತ್ತದೆ. ಎಸ್‌ಸಿಪಿ: ಟಿಎಸ್‌ಪಿ ಹಣ 1997-98 ರದ್ದು ಅಲ್ಲ. 1996-97ರಲ್ಲಿ ಎಸ್‌ಸಿಪಿ: ಟಿಎಸ್‌ಪಿ ಹಣ 8 ಕೋಟಿ 20 ಲಕ್ಷ ರೂಪಾಯಿ ಸರ್ಕಾರದಿಂದ ಬರಬೇಕಾಗಿರುವುದು ನಿಜ. ಇದಕ್ಕೆ ಕಾರಣವೆಂದರೆ 1996-97ರಲ್ಲಿ ಪೂಲಿಂಗ್ ಮಾಡದೇ ವಿತ್‌ಡ್ರಾ ಮಾಡಿದಾಗ, ಎಲ್ಲಾ ಸದಸ್ಯರುಗಳು ಅಲ್ಲಿ ಈಗಾಗಲೇ ಕೆಲಸವನ್ನು ಪ್ರಾರಂಭವಾಗಿದೆ. ಆದ್ದರಿಂದ ಅದನ್ನು ವಿತ್‌ಡ್ರಾ ಮಾಡಬೇಡಿ, ಈ ವರ್ಷ ಕಾಮಗಾರಿಗಳನ್ನು ಮಾಡುವುದಕ್ಕೆ ಹಣ ಕೊಡಬೇಕು ಎಂದು ಒತ್ತಾಯ ಮಾಡಿದ್ದರಿಂದ ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಸಹ ಆಗಿದೆ. 1996-97ರ ಎಸ್‌ಸಿಪಿ: ಟಿಎಸ್‌ಪಿ ಯ 8 ಕೋಟಿ 20 ಲಕ್ಷ ಹಣವನ್ನು ಮತ್ತೆ ಮಂಡಳಿಗೇ ಕೊಡಬೇಕು ಎಂದು ತೀರ್ಮಾನವಾಗಿದೆ. 1997-98ರಲ್ಲಿ ನಾವು 21 ಕೋಟಿ ರೂಪಾಯಿ ಆ್ಯಕ್ಷನ್ ಪ್ಲಾನ್ ಮಾಡಿದ್ದೇವೆ. ಅದರಲ್ಲಿ 15 ಕೋಟಿ 70 ಲಕ್ಷ ಬಿಡುಗಡೆಯಾಗಿದೆ. ಉಳಿದ 5 ಕೋಟಿ

30 ಲಕ್ಷ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಹಣಕಾಸು ಇಲಾಖೆಗೆ ಕೇಳಿದ್ದೇವೆ. ಹಾಗೆಯೇ ಎಸ್‌ಸಿಪಿ : ಟಿಎಸ್‌ಪಿ ಹಣವನ್ನೂ ಬಿಡುಗಡೆ ಮಾಡಬೇಕೆಂದೂ ಕೇಳಿದ್ದೇವೆ. ನಾವು ಹಣ ಕೊಡಲಿಲ್ಲವೆಂದು ಎಸ್‌ಸಿಪಿ: ಟಿಎಸ್‌ಪಿ ಕಾಮಗಾರಿಗಳನ್ನು ನಿಲ್ಲಿಸಿಲ್ಲ. ಸಾಮಾನ್ಯ ಕಾಮಗಾರಿಗೆ ಹಣ ಕೊಟ್ಟಿದ್ದಾರೆ. ಆ ಹಣದಿಂದ ಇವಕ್ಕೂ ಹಣ ಕೊಡುತ್ತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಂತ್ರಿಗಳು ಹೇಳುವುದು ಸರಿ ಇದೆ. ಕಾಮಗಾರಿಗಳನ್ನು ನಿಲ್ಲಿಸಿಲ್ಲ. ಆದರೆ ಹಣ ಬಿಡುಗಡೆ ಮಾಡಿಲ್ಲ. ಇದು ಹೇಗಾಗುತ್ತದೆ? ಈ ಹಣ 1997-98ರದ್ದು ಅಲ್ಲ, ಇದು 1996-97ರದ್ದು ಎಂದು ನೀವು ಹೇಳಿದ ಕ್ಲಾರಿಫಿಕೇಷನ್ ಅನ್ನು ನಾನು ಒಪ್ಪುತ್ತೇನೆ. ಎರಡು ವರ್ಷದ ಕೆಳಗೆ ಕಾಮಗಾರಿಯಾಗಿ ಹೋಗಿದೆ. ಅಲ್ಲಿ ಕೆಲಸ ಆಗಿ ಹೋಯಿತು, ಆದರೆ ಹಣ ಬಿಡುಗಡೆ ಮಾಡಿಲ್ಲವೆಂದರೆ ಈಗ ಏನು ಗತಿ? ಅದನ್ನೇ ನಾನು ನಿಮ್ಮನ್ನು ಕೇಳುತ್ತಿರುವುದು. ಹಣಕಾಸು ಇಲಾಖೆಗೆ ನಾವು ಕಳುಹಿಸಿದ್ದೇವೆ ಎಂದು ಹೇಳಿದಿರಿ. ಹಣಕಾಸು ಇಲಾಖೆಯವರು ಒಪ್ಪುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ.

ಉಪಾಧ್ಯಕ್ಷರು: ನೀವು ಹೇಳುವಷ್ಟು ಅಂತರ ಇಲ್ಲ. ಕೇವಲ 5 ಕೋಟಿರೂಗಳು ಮಾತ್ರ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಎಸ್‌ಸಿಪಿ ಯದ್ದು 8 ಕೋಟಿ 20 ಲಕ್ಷ, 5 ಕೋಟಿ ಸಾಮಾನ್ಯ ಹಣ. ಒಟ್ಟು 13 ಕೋಟಿ 20 ಲಕ್ಷ.

ಉಪಾಧ್ಯಕ್ಷರು: ಬಿಡುಗಡೆ ಮಾಡಿಸುತ್ತೇವೆ ಎಂದು ಹೇಳುತ್ತಾರಲ್ಲಾ. ಸರ್ಕಾರಕ್ಕೆ ಬರೆದಿದ್ದೇನೆ, ಬಿಡುಗಡೆ ಮಾಡಿಸುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಉಪಾಧ್ಯಕ್ಷರೇ, ನೀವು ಅವರನ್ನು ಹಾಗೆ ರಕ್ಷಣೆ ಮಾಡಬೇಡಿ. ನೀವು ಹೀಗೆ ಹೇಳಿದರೆ ಅವರು ಸದನಕ್ಕೇ ಬರುವುದಿಲ್ಲ. ಮನೆಯಲ್ಲೇ ಕುಳಿತು ಉತ್ತರ ಕಳುಹಿಸುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಂಸದೀಯ ವ್ಯವಹಾರಗಳ ಸಚಿವರು ಇಲ್ಲೇ ಇದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಳಿಗೆ ಇಟ್ಟಿದ್ದಂಥ 30 ಕೋಟಿಯಲ್ಲಿ 15 ಚಿಲ್ಲರೆ ಕೋಟಿ ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಬಿಡುಗಡೆ ಮಾಡಿಸುತ್ತೇನೆ ಎಂದು ಹೇಳಲಿ. ತಾವು ಹಣಕಾಸಿನ ಇಲಾಖೆಗೆ ಕಳುಹಿಸುವುದು ಸ್ವಾಭಾವಿಕ. ತಾವು ಇವತ್ತು ಮಂತ್ರಿಗಳಾಗಿ ಹೇಳಿ. ಅವತ್ತು ಹಣಕಾಸಿನ ಸಚಿವರೂ ಹೇಳಿದ್ದಾರೆ. ಹೋದ ವರ್ಷದ ಹಣ ಲ್ಯಾಪ್ಸ್ ಆಗದ ಹಾಗೆ, ಅದು ಎಸ್‌ಸಿಪಿಯದು ಇರಬಹುದು, ಇತರೆಯದು ಇರಬಹುದು, ಈ ಎಲ್ಲಾ 15 ಕೋಟಿಯನ್ನು ನಾವು ಬಿಡುಗಡೆ ಮಾಡಿಸುತ್ತೇವೆ ಎಂದು

ಹೇಳಿದರೆ ಆಯಿತು.

ಉಪಾಧ್ಯಕ್ಷರು: ಬಿಡುಗಡೆ ಮಾಡಿಸುತ್ತೇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು, ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆ ಎಂದರೆ ಹೇಗೆ?

ಶ್ರೀ ಕೆ.ವೆಂಕಟೇಶ್: ಬಿಡುಗಡೆ ಮಾಡಿಸುತ್ತೇವೆ ಎಂದು ಹೇಳಲಿಲ್ಲ. ಹಣಕಾಸು ಇಲಾಖೆಗೆ ಬಿಡುಗಡೆ ಮಾಡಿ ಎಂದು ಹೇಳಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ನೀವು ಅವರ ರಕ್ಷಣೆಗೆ ಹೋದಿರಿ, ಅವರು ಈಗ ನಿಮಗೇ ಟೋಪಿ ಹಾಕಿದರು?

ಉಪಾಧ್ಯಕ್ಷರು: ನಾವು ಎಲ್ಲಾ ರಕ್ಷಣೆಯನ್ನೂ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ ;- ಸನ್ಮಾನ್ಯ ಸಂಸದೀಯ ಮಂತ್ರಿಗಳು ಇಲ್ಲೇ ಇದ್ದಾರೆ. ಅಲ್ಲಿ ಕಾಮಗಾರಿಗಳು ಆಗಿ ಹೋಗಿವೆ. ಹಣ ಬಿಡುಗಡೆ ಮಾಡುವುದಕ್ಕೆ ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಿದ್ದಾರೆ. ತಾವು ಹಿರಿಯ ಸಚಿವರಿದ್ದೀರಿ, ಹಣ ಬಿಡುಗಡೆ ಮಾಡುತ್ತೀರೋ ಇಲ್ಲವೋ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಿ.

ಶ್ರೀ ಮಂಜುನಾಥ ಸಿ.ಕುನ್ನೂರು: 1994-95ರಲ್ಲಿ 35 ಕೋಟಿ ರೂಪಾಯಿಯನ್ನು ನಾವು ಮಲೆನಾಡು ಅಭಿವೃದ್ಧಿಗೆ ಖರ್ಚು ಮಾಡಿದ್ದೇವೆ.

ಶ್ರೀ ಎಂ.ಸಿ.ನಾಣಯ್ಯ: ನಮ್ಮ ಕಾಲ ಆಗಿ ಹೋಯಿತು. ನಿಮ್ಮ ಕಾಲದಲ್ಲಿ ಏನು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಕೊಟ್ಟಷ್ಟನ್ನಾದರೂ ಕೊಡಿ. ನಮ್ಮ ಕಾಲದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಗೆ ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟಿದ್ದೇವಲ್ಲಾ, ಅಷ್ಟಾದರೂ ಕೊಟ್ಟು ನೀವು ಸ್ವಲ್ಪ ಕೀರ್ತಿ ಪಡೆದುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ಕೇಳಿದಾಗ, ನಿಮ್ಮ ಕಾಲದಲ್ಲಿ ಏನಾಯಿತು ಎಂದು ಹೇಳುವುದಕ್ಕೆ ಪ್ರಾರಂಭ ಮಾಡುತ್ತೀರಿ. ಅವರು ಸರಿಯಾಗಿ ಮಾಡಲಿಲ್ಲ ಎನ್ನುವುದಕ್ಕೋಸ್ಕರ ಇಲ್ಲಿಗೆ ಬಂದಿದ್ದಾರೆ. ಮತ್ತೆ ನಾಳೆ ನಾವು ಅಲ್ಲಿಗೆ ಬಂದಾಗ ನಾವೂ ಸಹ ನಿಮ್ಮ ಕಾಲದಲ್ಲಿ ಎಂದು ಹೇಳುವಂಥ ಪರಿಸ್ಥಿತಿ ಬರಬಾರದು.

ಶ್ರೀ ಎಂ.ಸಿ.ನಾಣಯ್ಯ: ನಾವು ಒಂದು ಕಾಲದಲ್ಲಿ ಅಲ್ಲಿಗೆ ಬಂದಾಗ ಆ ರೀತಿಯ

ಪರಿಸ್ಥಿತಿ ಬರುತ್ತದೆ ಎಂದು ಹೇಳುವ ಮಟ್ಟಕ್ಕೆ ಈಗಲೇ ಬಂದುಬಿಟ್ಟಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ: ಆ ರೀತಿ ಆಗಬಾರದೆಂದೇ ಹೇಳುತ್ತಿದ್ದೇವೆ. ನೀವು ಅಲ್ಲೇ ಇರಿ. ಆದರೆ ಹಣ ಬಿಡುಗಡೆ ಮಾಡುವ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಎಂ.ಸಿ.ನಾಣಯ್ಯ: ನಿಮ್ಮ ಆಶೀರ್ವಾದ ಯಾವಾಗಲೂ ಅದೇ ರೀತಿ ಇರಲಿ. ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. 1996-97ರಲ್ಲಿ ನಾವು ಪ್ರಥಮ ಬಾರಿಗೆ ಸಿಂಗಲ್ ವಿಂಡೋ ಮಾಡಬೇಕೆಂದು ತೀರ್ಮಾನ ಮಾಡಿ ಎಲ್ಲಾ ಇಲಾಖೆಗಳಲ್ಲಿರತಕ್ಕಂಥ ಹಣವನ್ನು ಒಟ್ಟು ಮಾಡಿ ಎಸ್‌ಸಿಪಿಯಲ್ಲಿ ಇಟ್ಟಿರತಕ್ಕಂಥಾದ್ದನ್ನು ಬೇರೆ ಯೋಜನೆಗಳಿಗೆ ಖರ್ಚು ಮಾಡಬೇಕು ಎಂದು ಮಾಡಿದೆವು. ಆ ಸಂದರ್ಭದಲ್ಲಿ ಸುಮಾರು 7 ಕೋಟಿ ರೂಪಾಯಿಯನ್ನು ಅವರಿಗೆ ಕೊಡಬೇಕಾಗಿರತಕ್ಕಂಥಾದ್ದಾಗಿತ್ತು. ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಹಣದ ನಿರೀಕ್ಷಣೆ ಮೇಲೆ ಅಲ್ಲಿ ಹಣವನ್ನು ಖರ್ಚು ಮಾಡಿಬಿಟ್ಟಿದ್ದಾರೆ. ಆದ್ದರಿಂದ ಎಸ್‌ಸಿಪಿಯಲ್ಲಿ ಬರಬೇಕಾಗಿದ್ದ 7 ಕೋಟಿ ರೂಪಾಯಿ ಸಿಂಗಲ್ ವಿಂಡೋ ಏಜೆನ್ಸಿಗೆ ಕೊಡಬೇಕು ಎನ್ನುವ ಸರ್ಕಾರಿ ಆಜ್ಞೆಯಾದ ಮೇಲೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನಾವು ಸಚಿವ ಸಂಪುಟ ಸಭೆಯಲ್ಲಿ ಇದನ್ನು ತಂದು, ಈಗಾಗಲೇ ಮಲೆನಾಡು ಅಭಿವೃದ್ಧಿ ಮಂಡಳಿ ಮುಖಾಂತರ ಕೆಲಸಗಳು ಎಸ್.ಸಿ.ಪಿ ಯಲ್ಲಿ ಆಗಿರುವುದರಿಂದ ಪುನಃ ಅದನ್ನು ಸಿಂಗಲ್ ವಿಂಡೋ ಏಜೆನ್ಸಿ ಮುಖಾಂತರ ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟರೆ, ಅಲ್ಲಿ ಈಗಾಗಲೇ ಮಾಡಿರತಕ್ಕಂಥ ಕೆಲಸಕ್ಕೆ ಹಣವನ್ನು ಯಾವ ರೀತಿ ಕೊಡುವುದು? ಆದ್ದರಿಂದ ಆ ವರ್ಷ ಅಂದರೆ 1996-97ಕ್ಕೆ ಸೀಮಿತವಾಗಿ ಮಲೆನಾಡು ಅಭಿವೃದ್ಧಿ ಮಂಡಳಿ ಮುಖಾಂತರವೇ ಅದನ್ನು ಖರ್ಚು ಮಾಡಬೇಕು ಎನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಇದು ಕೇವಲ ಅಡ್ಜಸ್ಟ್‌ಮೆಂಟ್‌ನ ಪ್ರಶ್ನೆಯಷ್ಟೇ. ಅದನ್ನು ಮಾಡಲು ಕ್ರಮ ಕೈಗೊಳ್ಳುತ್ತೇವೆ. ತಮಗೆಲ್ಲಾ ತಿಳಿದ ಹಾಗೆ ಮಲೆನಾಡು ಅಭಿವೃದ್ಧಿ ಮಂಡಳಿ ರಚನೆ ಮಾಡಿರತಕ್ಕಂಥ ಉದ್ದೇಶವೆಂದರೆ ಮಲೆನಾಡು ಪ್ರದೇಶಕ್ಕೆ ಸ್ವಲ್ಪಮಟ್ಟಿಗೆ ಹಣವನ್ನು ಖರ್ಚು ಮಾಡಬೇಕೆಂಬುದೇ ಆಗಿದೆ. ಈಗ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ 71 ತಾಲ್ಲೂಕುಗಳು ಇವೆ. ಆದರೆ ಇರಬೇಕಾಗಿರತಕ್ಕಂಥಾದ್ದು 41 ಮಾತ್ರ. ಮಲೆನಾಡು ಯಾವುದು ಎನ್ನುವ ಬಗ್ಗೆ ನೀವೆಲ್ಲಾ ಸೇರಿ ತೀರ್ಮಾನ ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಯಾವಯಾವ ತಾಲ್ಲೂಕುಗಳಿವೆ ಎನ್ನುವುದರ ಬಗ್ಗೆ ಈಗ ವಿವಾದ ಬೇಡ. ಕೆಲವು ತಾಲ್ಲೂಕುಗಳನ್ನು ತೆಗೆಯಬೇಕೆಂದಿದ್ದರೆ ತೆಗೆಯಿರಿ, ಇಟ್ಟುಕೊಳ್ಳಬೇಕೇ, ಇಟ್ಟುಕೊಳ್ಳಿ.

ಶ್ರೀ ಎಂ.ಸಿ.ನಾಣಯ್ಯ: ಈ ಬಗ್ಗೆ ನಿಮ್ಮ ಚಿಂತನೆ ಏನು? ಮಲೆನಾಡಿನಲ್ಲಿ ಬಯಲು ಪ್ರದೇಶವಿದ್ದರೆ ಅದು ಹೇಗೆ ಎನ್ನುವುದು ನಿಮ್ಮ ಚಿಂತನೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಸರ್ಕಾರ ಅದನ್ನು ಒಪ್ಪಿಕೊಂಡು ಆಗಿದೆ. ಅದಕ್ಕೆ ಒಬ್ಬ ಮಂತ್ರಿಯನ್ನೂ ಕೊಟ್ಟಿದ್ದೀರಿ. ಆ ಮಂಡಳಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಮಾಡಿದ್ದೀರಿ. ಈಗ ನಮ್ಮ ಹತ್ತಿರ ಏಕೆ ಕೇಳುವುದಕ್ಕೆ ಬರುತ್ತೀರಿ? ನಮ್ಮ ಪ್ರಶ್ನೆಯೆಂದರೆ 1997-98ರ 5 ಕೋಟಿ 30 ಲಕ್ಷವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ: 1997-98ರ ಆಕ್ಷನ್ ಪ್ಲಾನ್‌ನ ಮೊತ್ತವೇನು ಎನ್ನುವುದನ್ನು ಮಂತ್ರಿಗಳು ಹೇಳಿದ್ದಾರೆ. ಆದರಲ್ಲಿ 15 ಕೋಟಿರೂಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದಾರೆ. ಬಾಕಿ ಇರತಕ್ಕಂಥಾದ್ದು ಸುಮಾರು 5 ಕೋಟಿ ರೂಪಾಯಿಗಳು, ಇದು ಬಿಡುಗಡೆಯಾಗಬೇಕಾಗಿದೆ. ಎಸ್‌ಸಿಪಿಯಲ್ಲಿ ಇರತಕ್ಕಂಥ 7 ಕೋಟಿ ಮತ್ತು ಇದರಲ್ಲಿರತಕ್ಕಂಥ 5 ಕೋಟಿ ಇವುಗಳನ್ನು ಬಿಡುಗಡೆ ಮಾಡುವ ಬಗ್ಗೆ ಈಗಾಗಲೇ ಮಂತ್ರಿಗಳು ಹಣಕಾಸು ಇಲಾಖೆಗೆ ಬರೆದಿದ್ದಾರೆ. ನಾವೂ ಸಹ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳುತ್ತೇವೆ. ನಾವು ಸರ್ಕಾರದ ಕಡೆಯಿಂದ ಈ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ವಿಷಯ: ಬೆಂಗಳೂರಿನಲ್ಲಿ ಕೊಳವೆ ಬಾವಿಗಳು.

210 (1233)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಇದನ್ನು ನಿವಾರಿಸಲು ಕೊಳವೆ ಬಾವಿಗಳನ್ನು ಕೊರೆಯುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆಯೆ?

ಇ) ಇಲ್ಲಿಯವರೆಗೆ ಎಷ್ಟು ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಸಲಾಗಿದೆ?

ಈ) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಸಲಾಗಿದೆ?

ಉ) ಕಾವೇರಿ ನದಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಪಡೆದುಕೊಳ್ಳಲು ಕೈಗೊಂಡ ಕ್ರಮಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):